**ವಿಷಯ: ಕೊಪ್ಪಳ ಪಟ್ಟಣಕ್ಕೆ ಕುಡಿಯುವ ನೀರಿನ ಸರಬರಾಜು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 748(719)

ಶ್ರೀ ಕರಡಿ ಸಂಗಣ್ಣಅಮರಪ್ಪ (ಕೊಪ್ಪಳ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಕೊಪ್ಪಳನಗರದಲ್ಲಿ ಕುಡಿಯುವ ನೀರಿನ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ತುಂಗಾಭದ್ರಾ ಜಲಾಶಯದಿಂದ ಕೊಪ್ಪಳ ನಗರಕ್ಕೆ ಕುಡಿಯುವ ನೀರು ಪೂರೈಸುವ ಯೋಜನೆಯ ಮಂಜೂರಾತಿ ಹಿಂದಿನ ಸರ್ಕಾರ ನೀಡಿದ್ದು ಜಾಕ್‌ವೆಲ್, ನೀರು ಶುದ್ಧೀಕರಣ ಘಟಕ ಹಾಗೂ ಪೈಪ್‌ಲೈನ್ ಕೆಲಸದ ಪ್ರಗತಿ ಕಂಡು ಬಂದಿಲ್ಲದಿರುವುದಕ್ಕೆ ಕಾರಣವೇನು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ. ಹೌದು.

ಆ. ಕೊಪ್ಪಳ ಪಟ್ಟಣದ ನೀರು ಸರಬರಾಜು ಯೋಜನೆಯನ್ನು ತುಂಗಭದ್ರಾ ನದೀ ಮೂಲದಿಂದ ಕೂಡಿದ್ದು ಇದಕ್ಕೆ ಆದೇಶ ಸಂಖ್ಯೆ ಹೆಚ್‌ಯುಡಿ :214 ಯುಡಬ್ಲ್ಯು ಎಸ್:89, ದಿನಾಂಕ : 30-3-90ರಲ್ಲಿ ಮಂಜೂರಾತಿ ನೀಡಿದೆ.

ಈ ಯೋಜನೆಯ ಕೆಲಭಾಗಗಳ ಪ್ರಗತಿಯಲ್ಲಿನ ನ್ಯೂನತೆಯ ಕಾರಣಗಳು ಕೆಳಕಂಡಂತಿದೆ.

**1. ಜಾಕ್‌ವೆಲ್ :**

ಕಾಮಗಾರಿಯು ಸಂಪರ್ಕ ರಸ್ತೆ ಇಲ್ಲದ್ದರಿಂದ ನಿಧಾನವಾಗಿತ್ತು. ಈಗ ರಸ್ತೆಯನ್ನು ಮಾಡಿದ್ದು ಗುತ್ತಿಗೆದಾರರನ್ನು ನಿಗಧಿಪಡಿಸಲು ಕ್ರಮ ಕೈಗೊಳ್ಳಲಾಗಿದೆ.

**2. ಪಿ.ಎಸ್.ಸಿ. ಪೈಪ್‌ಲೈನ್:**

ನದಿಯಿಂದ ಪಟ್ಟಣದವರೆಗೆ ಏರು ಕೊಳವೆ ಹಾಕಲು ನಿಗಧಿಪಡಿಸಿದ್ದ ಗುತ್ತಿಗೆದಾರನು ಕಾಮಗಾರಿ ಮಾಡಲು ವಿಫಲವಾದ್ದರಿಂದ ಕೈಗೊಳ್ಳಲು ಯೋಜಿಸಲಾಗಿದೆ.

**3. ಜಲಶುದ್ಧೀಕರ ಘಟಕ :**

ಜಲಶುದ್ಧಿಕರಣಾ ಘಟಕಕ್ಕೆ ಅವಶ್ಯಕತೆ ಇರುವ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆ.

**ವಿಷಯ : ಖಾಸಗಿ ಜಮೀನಿನಲ್ಲಿ ಗ್ರಾನೈಟ್ ಶಿಲೆಗಳನ್ನು ತೆಗೆಯುವುದು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 749 (720)

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಖಾಸಗಿ ಜಮೀನಿನಲ್ಲಿ ಎಲ್ಲೆಲ್ಲಿ ಗ್ರಾನೈಟ್ ಶಿಲೆಗಳನ್ನು ತೆಗೆಯಲಾಗಿದೆ : (ಜಿಲ್ಲಾವಾರು ವಿವರಗಳನ್ನು ನೀಡುವುದು)